**Further chief examination by SAK advocate for claimant.**

**Witness is duly sworn on 27-11-2023.**

I have submitted my affidavit evidence. I known contents of affidavit. Contents of the affidavit are truth.

**I have produced the following records:-**

**1. Notary attested true copy of registered sale deed dated: 13-01-2014 of Land Sy.No.159/6 extent 32 gunts of Nilgal village of Devadurga Taluk:- Ex.P1.**

**2. Notary attested true copy of registered sale deed dated: 12-01-2015 of Land Sy.No.25 extent 2 acres of Ganekal village of Devadurga Taluk:- Ex.P2.**

**3. Copy of price list of agricultural produces issued by the APMC for the year 2013-14:- Ex.P3.**

**4. Copy of Judgment dated: 18-11-2017 passed in LAC Nos.386/2016 (Old LAC No.142/2013) on the file of Senior Civil Judge at Devadurga:- Ex.P4.**

**5. Copy of Judgment dated: 18-11-2017 passed in LAC Nos.1149/2016 (Old LAC No.847/2014) on the file of Senior Civil Judge at Devadurga:- Ex.P5.**

**6. Copy of Judgment dated: 06-12-2013 of Hon'ble High Court of Karnatak Kalaburagi Bench in MSA Nos.1131 to 1133/2013:- Ex.P6.**

**7. Copy of Judgment dated: 17-12-2014 of Hon'ble High Court of Karnatak Kalaburagi Bench in MFA Nos.201472/2014:- Ex.P7.**

**8. Copy of Judgment dated: 20-12-2014 passed in LAC Nos.219, 220, 263 and 264/2012 on the file of Senior Civil Judge at Devadurga:- Ex.P8.**

**Cross examination by Sri.SH advocate:-**

ಭೂ ಸ್ವಾದೀನ ಆಗಿರುವ ಜಮೀನು ದೇವದುರ್ಗ ತಾಲ್ಲೂಕಿನ ರೇಕಲಮರಡಿ ಗ್ರಾಮದ ಜಮೀನು ಆಗಿದೆ. ಸದರಿ ಜಮೀನು ಮಳೆಯ ಆಧಾರಿತ ಒಣ ಬೇಸಾಯದ ಜಮೀನು ಆಗಿರುತ್ತವೆ ಎಂದರೆ ಸರಿ. ನೀರಾವರಿ ಉದ್ದೇಶದ ಕಾಲುವೆ ನಿರ್ಮಾಣಕ್ಕಾಗಿ ಜಮೀನುಗಳ ಭೂ ಸ್ವಾಧೀನ ಆಗಿರುತ್ತದೆ ಎಂದರೆ ಸರಿ. ಕಾಲುವೆ ನಿರ್ಮಾಣ ಮಾಡಿದ್ದರಿಂದ ಜಮೀನುಗಳಿಗೆ ನಿರಾವರಿ ಸೌಲಭ್ಯ ಒದಗಿ ಅನುಕೂಲವಾಗಿದೆ ಎಂದರೆ ಸರಿ.

2. ರೇಕಲಮರಡಿ ಗ್ರಾಮದ ಉತ್ತರಕ್ಕೆ ಜಾಗಿರಜಾಡಲದಿನ್ನಿ ಗ್ರಾಮ ಇದೆ, ದಕ್ಷಿಣಕ್ಕೆ ಕ್ಯಾದಿಗೇರಾ ಗ್ರಾಮ ಇದೆ, ಪೂರ್ವಕ್ಕೆ ಜಾಗಟಗಲ್ ಗ್ರಾಮ ಇದೆ ಮತ್ತು ಪಶ್ಚಿಮಕ್ಕೆ

ಕ್ಯಾದಿಗೇರಾ ಗ್ರಾಮ ಇದೆ. ನನಗೆ ಸರಿಯಾಗಿ ದಿಕ್ಕುಗಳು ಗೊತ್ತಾಗುವುದಿಲ್ಲ. ರೇಕಲಮರಡಿ ಗ್ರಾಮದ ಸುತ್ತ-ಮುತ್ತ ಕ್ಯಾದಿಗೇರಾ, ಅರಕೇರಾ, ನಾಗೋಲಿ, ಜಾಗರಜಾಡಲದಿನ್ನಿ ಮತ್ತು ಮಲ್ಲೆದೇವರ ಗುಡ್ಡ ಗ್ರಾಮಗಳು ಇವೆ. ನಿಲೋಗಲ್ ಗ್ರಾಮವು ದೇವದುರ್ಗ ತಾಲೂಕಿನ ಕೋನೆಯಗಡಿಯಲ್ಲಿದ್ದೆ ಅಂದರೆ ಸರಿ. ನಿಲೋಗಲ್ ಗ್ರಾಮದ ಪಕ್ಕದಲ್ಲಿ ಗಣೆಕಲ್ ಗ್ರಾಮ ಇದೆ ಅಂದರೆ ಸರಿ. ರೇಕಲಮರಡಿ ಗ್ರಾಮ ಮತ್ತು ನಿಲೋಗಲ್ ಹಾಗೂ ಗಣೇಕಲ್ ಗ್ರಾಮಗಳ ಮಧ್ಯದಲ್ಲಿ ಬೇರೆ ಸುಮಾರು 6 ಗ್ರಾಮಗಳು ಇವೆ ಅಂದರೆ ಸರಿ.

3. ರೇಕಲಮರಡಿ ಗ್ರಾಮದಿಂದ 20 ಕಿ.ಮಿ ದೂರದಲ್ಲಿ ಗಣೇಕಲ್ ಮತ್ತು ನಿಲೋಗಲ್ ಗ್ರಾಮಗಳು ಇವೆ ಅಂದರೆ ಸರಿ. ಸದರಿ ಗಣೇಕಲ್ ಮತ್ತು ನಿಲೋಗಲ್ ಗ್ರಾಮಗಳು ಗಬ್ಬೂರಿ ಹೊಬಳಿಯಲ್ಲಿ ಇವೆ. ರೇಕಲಮರಡಿ ಗ್ರಾಮವು ಅರಕೇರಾ ಹೊಬಳಿಯಲ್ಲಿ ಇದೆ.

4. 2010 ರಿಂದ ಇಸವಿಯಿಂದ 2013 ನೇ ಇಸವಿ ತನಕ ರೇಕರಮರಡಿ ಗ್ರಾಮದ ಜಮೀನುಗಳ ಮಾರಾಟ ವ್ಯವಹಾರಗಳು ನಡೆದಿವೆ ಎಂದರೆ ಸರಿ. ಸದರಿ ಮಾರಾಟ ಪತ್ರಗಳನ್ನು ಹಾಜರಿಸಿಲ್ಲ. ಭೂ ಸ್ವಾಧೀನ ಮಾಡಿಕೊಳ್ಳುವ ಮೊದಲು ಭೂ ಮಾಲೀಕರಿಗೆ ನೋಟಿಸ್ಸು ನೀಡಲಾಗಿದೆ ಎಂದರೇ ಸರಿ. ಭೂ ಸ್ವಾಧೀನ ಅಧಿಕಾರಿಗೆ ನಾವು ದಾಖಲೆ ಕೊಟ್ಟಿರಲಿಲ್ಲ.

5. ನಾನು ಹೆಚ್ಚಿನ ಪರಿಹಾರ ಪಡೆದುಕೊಳ್ಳುವ ದುರುದ್ದೇಶದಿಂದ ಸಂಬಂಧಪಡದೇ ಇರುವ ಕ್ರಯ ಪತ್ರಗಳು,ಕ್ರಯ ಕರಾರು ಮತ್ತು ಇತರೇ ದಾಖಲೆಗಳನ್ನು ಹಾಜರಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪತ್ರದಲ್ಲಿ ಸುಳ್ಳಿನ ವಿಷಯ ತಿಳಿಸಿದ್ದೇನೆ ಎಂದರೆ ಸರಿಯಲ್ಲ.

6. ಭೂ ಸ್ವಾಧೀನ ಪ್ರಕ್ರಿಯೆಯು 2013 ನೇ ಇಸವಿಯಲ್ಲಿ ಪ್ರಾರಂಭವಾಗಿತ್ತು ಎಂದರೆ ಸರಿ. ಭೂ ಸ್ವಾದೀನದ ಬಗ್ಗೆ ನಮಗೆ ನೋಟಿಸ್ಸು ನೀಡಿದ್ದರು ಎಂದರೇ ಸರಿ. ಭೂ ಸ್ವಾಧೀನ ಪ್ರಕ್ರಿಯೆಯ ಪ್ರಾಥಮಿದ ಅಧಿಸೂಚನೆಯ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿತ್ತು. ಜಮೀನಿನ ಜಂಟಿ ಮೊಜಿಣಿ ನಡೆಸಲಾಗಿತ್ತು ಎಂದರೆ ಸರಿ. ನಂತರ ಭೂ ಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆ ಪ್ರಕಟಿಸಲಾಗಿತ್ತು ಎಂದರೆ ಸರಿ. ಭೂ ಸ್ವಾಧೀನ

ಅಧಿಕಾರಿಯು ಸ್ಥಳ ಪರಿಶೀಲಿಸಿ ಪ್ರತಿಯೊಂದು ಜಮೀನಿನಲ್ಲಿರುವ ಮರ ಗಿಡಗಳು, ಕಟ್ಟಡ ಇತ್ಯಾದಿಗಳನ್ನು ಪರಿಶೀಲಿಸಿ ಪ್ರತಿ ಜಮೀನಿಗೆ ಸರಿಯಾದ ಮಾರುಕಟ್ಟೆ ದರ ನಿರ್ದರಣೆ ಮಾಡಿ ಪರಿಹಾರ ಘೋಷಣೆ ಮಾಡಲಾಗಿದೆ ಎಂದರೆ ಸರಿಯಲ್ಲ.

7. ಪ್ರಾಥಮಿಕ ಅಧಿಸೂಚನೆ ದಿನಾಂಕಕ್ಕಿಂತ ಮೂರು ವರ್ಷಗಳ ತನಕದ ಹಿಂದಿನ ಅವಧಿಯ ನಮ್ಮ ಗ್ರಾಮದ ಜಮೀನುಗಳ ನೊಂದಣಿ ಕ್ರಯ ಪತ್ರಗಳನ್ನು ನಾವು ಭೂ ಸ್ವಾಧೀನ ಅಧಿಕಾರಿಗೆ ಕೊಟ್ಟಿರಲಿಲ್ಲ ಎಂದರೆ ಸರಿ.

8. ಭೂ ಸ್ವಾಧೀನ ಅಧಿಕಾರಿಗಳು 2010 ನೇ ಇಸವಿಯಿಂದ 2013 ನೇ ಇಸವಿಯ ತನಕ ನಮ್ಮ ಗ್ರಾಮದ ಜಮೀನುಗಳ ನೊಂದಣಿ ಕ್ರಯ ಪತ್ರಗಳ ಅಂಕಿ ಸಂಖ್ಯೆಗಳನ್ನು ಪಡೆದುಕೊಂಡು ಅವುಗಳ ಆದಾರದ ಮೇಲೆ ಭೂ ಸ್ವಾಧೀನ ಕಾಯ್ದೆ 2013 ಕಲಂಃ 26 ರ ಪ್ರಕಾರ ಸರಿಯಾಗಿ ಭೂ ಸ್ವಾಧೀನ ಆಗಿರುವ ಜಮೀನುಗಳ ಮಾರುಕಟ್ಟೆ ಬೆಲೆಯನ್ನು ನಿರ್ದರಣೆ ಮಾಡಿ ಸೂಕ್ತ ಪರಿಹಾರದ ಬಗ್ಗೆ ಐ ತೀರ್ಪು ರಚಿಸಿರುತ್ತಾರೆ ಎಂದರೆ ಗೊತ್ತಿಲ್ಲ.

9. ರೇಕರಮರಡಿ ಗ್ರಾಮದ ಜಮೀನುಗಳ ಮಾರಾಟ ಪತ್ರಗಳನ್ನ ಹಾಜರಿಸಿಲ್ಲ.

10. ಭೂ ಸ್ವಾಧೀನ ಕಾಯ್ದೆ 2013 ರ ಕಲಂಃ 26 ರಿಂದ 30 ರ ಪ್ರಕಾರ ಭೂ ಸ್ವಾಧೀನ ಅಧಿಕಾರಿಯು ಎಲ್ಲಾ ಅಂಶಗಳನ್ನು ಮತ್ತು ಕ್ರಯ ಪತ್ರಗಳ ಅಂಕಿ ಸಂಖ್ಯೆಗಳನ್ನು ಆದಾರಿಸಿ ಸರಿಯಾದ ಮಾರುಕಟ್ಟೆ ದರ ನಿರ್ದರಿಸಿ ಭೂ ಸ್ವಾಧೀನ ಮಾಡಿಕೊಂಡಿರುವ ಜಮೀನುಗಳಿಗೆ ಸರಿಯಾದ ಪರಿಹಾರ ಘೋಷಿಸಿರುವುದರಿಂದ ನಾನು ಮತ್ತು ಉಳಿದ ಕೇಸುಗಳ ಅರ್ಜಿದಾರರು ಹೆಚ್ಚಿನ ಪರಿಹಾರ ಕೇಳಲು ಅರ್ಹರಲ್ಲ ಎಂದರೆ ಸರಿಯಲ್ಲ. ಭೂ ಸ್ವಾಧೀನ ಅಧಿಕಾರಿಯು ಸ್ಥಳಕ್ಕೆ ಬೇಟಿ ನೀಡದೇ ಮತ್ತು ಭೂಮಿಯ ಫಲವತ್ತತೆ, ಸೌಲಭ್ಯಗಳು ಮತ್ತ ಗುಣಗಳು ಹಾಗೂ ಬೆಳೆಗಳು ಇತ್ಯಾದಿಗಳನ್ನು ಪರಿಶೀಲಿಸದೇ ಕಡಿಮೆ ಪರಿಹಾರ ಘೊಷಣೆ ಮಾಡಲಾಗಿದೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳಿನ ವಿಷಯ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಿಂದ 8 ರ ದಾಖಲೆಗಳ ಜಮೀನುಗಳಿಗೂ ಮತ್ತು ಭೂ ಸ್ವಾದೀನ ಆಗಿರುವ ಜಮೀನುಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

11. ನಿಪಿ1 ಮತ್ತು 2 ರ ಕ್ರಯ ಪತ್ರಗಳು ಭೂ ಸ್ವಾದೀನ ಪ್ರಾಥಮಿಕ ಅಧಿಸೂಚೆನೆ ಆದ ನಂತರ ಅವದಿಗೆ ಸಂಬಂಧಿಸಿದೆ ಎಂದರೆ ಸರಿ.

12. ನಿಪಿ-4 ರಿಂದ 8 ರ ದಾಖಲೆಗಳ ಜಮೀನುಗಳು ಭೂ ಸ್ವಾಧೀನ ಕಾಯ್ದೆ 1894 ರ ಅಡಿಯಲ್ಲಿ ಭೂ ಸ್ವಾಧೀನ ಆಗಿತ್ತು ಮತ್ತು ಸದರಿ ಕಾಯ್ದೆಯ ಸದರಿ ಪರಿಹಾರ ನೀಡಲಾಗಿದೆ ಎಂದರೆ ಸರಿ. ಸದರಿ ದಾಖಲೆಗಳ ಜಮೀನುಗಳು ನಮ್ಮ ಗ್ರಾಮಕ್ಕೆ ಸಂಬಂಧಿಸಿಲ್ಲ ಎಂದರೆ ಸರಿ.

13. ಭೂ ಸ್ವಾಧೀನ ಅಧಿಕಾರಿಯು ಸ್ಥಳಕ್ಕೆ ಬೇಟಿ ನೀಡಿ ಸ್ಥಳವನ್ನು ಪರಿಶೀಲಿಸಿ ಜಮೀನುಗಳ ಮಾರಾಟ ಅಂಕಿ ಅಂಶಗಳನ್ನು ಸಂಗ್ರಹಿಸಿ ಅವುಗಳನ್ನು ಪರಿಗಣಿಸಿ ಅವುಗಳ ಆಧಾರದ ಮೇಲೆ ಭೂ ಸ್ವಾಧೀನ ಮಾಡಿಕ್ಕೊಳಲಾದ ಜಮೀನುಗಳಿಗೆ ಸರಿಯಾದ ಮಾರುಕಟ್ಟೆ ಬೆಲೆ ನಿರ್ದರಿಸಿ ಸರಿಯಾದ ಪರಿಹಾರ ಘೋಷಣೆ ಮಾಡಲಾಗಿದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-</u>

ಇಲ್ಲ.

(ಉಕ್ತ ಉಲ್ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಣ ಮಾಡಲಾಯಿತು)

**ಓ. ಹೇ. ಕೇ. ಸರಿ ಇದೆ.**

. 6

**1ನೇ ಹೆಚುವ್ವರಿ ಸತ್ರ ನ್ಯಾಯಾಧೀಶರು,**
**ರಾಯಚೂರು.**